ಪಿಡಬ್ಲ್ಯೂ-1

**ದಿನಾಂಕಃ 12-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಎಸ್.ಎಲ್.ಎಸ್. ಪಿರ್ಯಾದಿ ಪರ ವಕೀಲರಿಂದಃ**

ಈ ಮೊದಲಿನ ಮುಕ್ತಿಯಾರದಾರ ನೌಕರಿ ಬಿಟ್ಟು ಹೋಗಿರುವುದರಿಂದ ಫಿರ್ಯಾದಿ ಸಂಸ್ಥೆಯವರು ನನಗೆ ಈ ಪ್ರಕರಣ ನಡೆಸಲು ಅಧಿಕಾರ ಪತ್ರವನ್ನು ನೀಡಿರುತ್ತಾರೆ. ಅದರ ಆಧಾರದ ಮೇಲೆ ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ, ನಾನೇ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ನನ್ನ ಫಿರ್ಯಾದಿಗೆ ಪೂರಕವಾಗಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರು ನನಗೆ ಬರೆದುಕೊಟ್ಟಿರುವ ಅಧಿಕಾರ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು **ನಿಪಿ-1** ಎಂದು, ಆರೋಪಿಯು ನಮ್ಮ ಸಂಸ್ಥೆಗೆ ನೀಡಿರುವ ಚೆಕ್‌ನ್ನು ಹಾಜರುಪಡಿಸಿದ್ದು ಅದನ್ನು **ನಿಪಿ-2** ಎಂದು, ಸದ್ರಿ ಚೆಕ್‌ನಲ್ಲಿ ಆರೋಪಿಯ ಸಹಿ ಇದೆ ಎಂದು ಸಾಕ್ಷಿಯು ಗುರುತಿಸಿದ್ದು ಸದ್ರಿ ಸಹಿಯನ್ನು **ನಿಪಿ-2(ಎ)** ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಪಿರ್ಯಾದಿದಾರರ ಪರ ವಕೀಲರು ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ-

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.